N.R.W.S. Schemes in Kallambella Constituency

224. Sri T. TARE GOWDA (Kallambella).—

Will the Minister for Community Development and Social Welfare be pleased to state :—

(*a*) whether the V. P. Chairman, Kallambella, Sira Taluk, Thimmanahalli, Kandikere Hobli, Chiknaikanahalli Taluk and Hagalwadi, Gubbi Taluk have been urging for L.R.A. Grants for meeting the balance of 10 per cent contribution towards the rural water supply schemes to these three places ;

(*b*) whether the Secretary to Government D.H.P.C., Department has requested the Divisional Commissioner, Bangalore Division, Bangalore to give 10 per cent L.R.A. Grant as a special case to Thimmanahalli, V. P. Kandikere Hobli, Chiknaikanahalli Taluk in his letter No. DPC 92 VRW 73 dated 19-1-1973 regarding the Rural Water Supply Scheme ;

(*c*) if so, the steps taken to instruct the Divisional Commissioner, Bangalore to give only the balance of 10 per cent L.R.A. grant to Kallambella V.P., Sira Taluk and Hagalwadi V.P. Gubbi Taluk towards Rural Water Supply Schemes ;

(*d*) whether, there is any proposal before Government to sanction National Rural Water Supply Schemes to the above three Hobli Headquarters' big villages in Sira, Chiknaikanahalli and Gubbi Taluks of 'Kallambella Constituency in Tumkur District ?

Sri M. MALLIKARJUNASWAMY (Minister for Community Development and Social Welfare).—

(*a*) In the case of Thimmanahalli, V.P. representation was received for providing assistance out of 10% L.R.A Grants. In respect of Hagalwadi Water Supply Scheme a sum of Rs. 4,150 has already been provided, out of 10% L.R.A. grant- In the case of Kallambella Water Supply Scheme no representation has been received for providing assistance out of 10% L.R.A. grants.

(*b*) Yes.

(*c*) Does not arise since no representations are received.

(*d*) No.

ಶ್ರೀ ಟಿ. ತಾರೇಗೌಡ.—ತಿಮ್ಮನಹಳ್ಳಿ ಪಂಚಾಯಿತಿಯವರು ಹಾಗೂ ತಾಲ್ಲೂಕಾ ಬೋರ್ಡಿನವರು ಅವರ ವಂತಿಗೆಯನ್ನು ಕೊಡಲು ಒಪ್ಪಿರುವುದರಿಂದ ಇಲ್ಲಿ ನೀರು ನರಬರಾಜು ಯೋಜನೆಯನ್ನು ಏಕೆ ಮುಂಗಿನಬಾರದು ?

†ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ತಿಮ್ಮನಹಳ್ಳಿ ಪಂಚಾಯಿತಿಯವರು ಎರ್. ಆರ್. ಎ ಮೂಲಕ 4,150 ರೂಪಾಯಿಗಳನ್ನು ಕೊಟ್ಟಿದ್ದಾರೆ ಇನ್ನೂ 12,950 ರೂಪಾಯಿಗಳನ್ನು ಕೊಡಬೇಕಾಗಿದೆ, ಇದರ ಜೊತೆಗೆ ಹಾಗಲವಾಡಿ ಪಂಚಾಯಿತಿಯವರು 4,150 ರೂಪಾಯಿಗಳನ್ನು ಕೊಟ್ಟಿದ್ದಾರೆ ಇನ್ನೂ 8,800 ರೂಪಾಯಿಗಳು ಬರಬೇಕಾಗಿದೆ. ಕಳ್ಳಂಬೆಳ್ಳ ಪಂಚಾಯತಿಯವರು 5,150 ರೂಪಾಯಿಯವರೆಗೆ ಕೊಟ್ಟಿದ್ದಾರೆ, ಇನ್ನೂ 10,380 ರೂಪಾಯಿಗಳನ್ನು ಕೊಡಬೇಕಾಗಿದೆ.

ಶ್ರೀ ಟಿ. ತಾರೇಗೌಡ.—ಅಭಾವ ಪ್ರದೇಶಗಳಿಗೆ ಕುಡಿಯುವ ನೀರನ್ನು ಒದಗಿಸುತ್ತೇವೆಂದು ಹೇಳಿದಿರಿ, ಎರಡು ಮೂರು ವರ್ಷಗಳಿಂದ ಎಸ್ಟಿಮೇಟು ಸಿದ್ಧವಾಗಿ ಹಣ ಕೊಟ್ಟರೂ ಎರ್. ಆರ್. ಗ್ರ್ಯಾಂಟ್ ಅಡ್ಜಸ್ಟ್ ಮಾಡಿ ಬ್ಯಾರನ್ಸ್ ಅಮೌಂಟ್ ಕೊಡುವುದಕ್ಕೆ ದೊಡ್ಡ ಮನಸ್ಸು ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ದೊಡ್ಡ ಮನಸ್ಸಿನ ಪ್ರಶ್ನೆಯಲ್ಲ. ಎರ್.ಆರ್. ಎಷ್ಟು ಕೊಡಬೇಕೋ ಅಷ್ಟನ್ನು ಕೊಟ್ಟಿದ್ದೇವೆ. ಪಂಚಾಯಿತಿಯವರು ಕೊಡಬೇಕಾದ ಹಣವನ್ನು ಕೊಡಲಿಲ್ಲ. ಪಂಚಾಯಿತಿಯಲ್ಲಿ ಟ್ಯಾಕ್ಸ್, ವಗೈರೆ ಅನ್ನು ಸರಿಯಾಗಿ ವಸೂಲು ಮಾಡುತ್ತಾ ಇಲ್ಲ. ಸ್ಟೇಟ್‌ನಲ್ಲಿ ಸುಮಾರು ಐದುಕೋಟಿ ರೂಪಾಯಿ ಪಂಚಾಯಿತಿಯಿಂದ ವಸೂರಾಗದೆ ನಿಂತಿದೆ. ಇವರು ಪಂಚಾಯಿತಿ ಹಣವನ್ನು ಬೇಗ ಕೊಟ್ಟರೆ ಎರ್. ಆರ್. ಗ್ರ್ಯಾಂಟ್ ಅನ್ನು ಏನು ಕೊಡಬೇಕೋ ಅದನ್ನ ಕೊಡುತ್ತೇವೆ.

ಶ್ರೀ ಟಿ. ತಾರೇಗೌಡ.—ತಿಮ್ಮನಹಳ್ಳಿ ಪಂಚಾಯಿತಿಯವರು 12ನೇ ತಾರೀಖು ಮೂರು ಸಾವಿರ ರೂಪಾಯಿಗಳನ್ನು ಸರ್ಕಾರಕ್ಕೆ ಕಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಇತ್ತೀಚೆಗೆ ಕಟ್ಟಿರುವುದು ನನ್ನ ಗಮನಕ್ಕೆ ಬಂದಿಲ್ಲ. ಕಟ್ಟಿದ್ದರೆ ಅಲ್ಲಿಯ ಕೆಲಸ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಯಂಕಟಪ್ಪ.—ಪಂಚಾಯಿತಿಯವರು ಕೊಡಬೇಕಾದ ವಂತಿಗೆ ಐದು ಕೋಟಿ ರೂಪಾಯಿಗಳು ಇನ್ನೂ ವಸೂಲಿಯಾಗಬೇಕು ಎಂದು ಹೇಳಿದಿರಿ, ಸರ್ಕಾರದವರು ನೇಮಕ ಮಾಡಿರತಕ್ಕ ಏಲೇಜ್ ಆಕೌಂಟೆಂಟುಗಳು, ಪಂಚಾಯಿತಿ ಕಾರ್ಯದ ಬಗ್ಗೆ ಹೆಚ್ಚು ಗಮನ ಪಹಿಸುತ್ತಿಲ್ಲ, ಅವರು ವಸೂಲಿಯ ಬಗ್ಗೆ ಏನು ಕ್ರಮ ತೆಗೆದುಗೊಂಡಿಲ್ಲ, ಇದಕ್ಕೆ ಪಂಚಾಯಿತಿಯವರು ಕಾರಣರೋ ಅಥವಾ ವಿಲೇಜ್ ಅಕೌಂಟೆಂಟ್‌ರುಗಳು ಕಾರಣರೋ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎನ್. ಬಸವಯ್ಯ.—ತಿಮ್ಮನಹಳ್ಳಿ, ಚಿಕ್ಕನಾಯಕನಹಳ್ಳಿ ಪಂಚಾಯಿತಿಯವರಿಂದ 10 ಪರ್ಸೆಂಟ್ ಹಣವನ್ನು ಕೊಡುವುದಕ್ಕಾಗುವುದಿಲ್ಲ. ಗ್ರಾಮದ ಇತರೆ ಕೆಲಸಗಳಿಗೋಸ್ಕರ ಹಣವನ್ನು ಉಪಯೋಗಿಸಬೇಕು, ಪಂಚಾಯಿತಿಯವರು ಐದು ಪರ್ಸೆಂಟ್ ಹಣವನ್ನು ಕೊಡುತ್ತಾರೆ ಇನ್ನು ಐದು ಪರ್ಸೆಂಟ್ ಅನ್ನು ಎರ್. ಆರ್. ಗ್ರ್ಯಾಂಟಿನ ಮೂಲಿಕ ಕೊಡಿಸಿ ಕೊಡಿ ಎಂದು ಕೇಳುತ್ತೇನೆ. ಅದಷ್ಟು ಬೇಗ, ಇದು ದೊಡ್ಡ ಗ್ರಾಮವಾಗಿರುವುದರಿಂದ ನೀರನ್ನು ಒದಗಿಸಿ ಕೊಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಪರಿಶೀಲನೆ ಮಾಡುತ್ತೇವೆ.

ಶ್ರೀ ಟಿ. ತಾರೇಗೌಡ.—ಕಳ್ಳಂಬೆಳ್ಳದಲ್ಲಿ ಕುಡಿಯುವ ನೀರು ಇಲ್ಲದೆ ಕೆರೆಯ ನೀರನ್ನು ಕುಡಿಯುತ್ತಿದ್ದಾರೆ. ಹಾಗಲವಾಡಿಯಲ್ಲಿಯೂ ನೀರು ಇಲ್ಲದೆ ಇರುವುದರಿಂದ ತೊಂದರೆಯಾಗಿ ಜನ ಕಷ್ಟದಲ್ಲಿದ್ದಾರೆ. ಆ ಜನಕ್ಕೆ ಮುಖ್ಯವಾಗಿ ಕುಡಿಯುವ ನೀರಿನ ಅವಶ್ಯಕವಿರುವುದರಿಂದ ಸರ್ಕಾರದವರು ರಿಯಾಯಿತಿ ತೋರಿಸಿ ಅವರಿಗೆ ಗ್ರ್ಯಾಂಟ್‌ನ್ನು ಮಂಜೂರು ಮಾಡುವುದಕ್ಕೆ ಯೋಚನೆ ಮಾಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ರಿಗ್ ವೆರ್ಸ್, ಬೋರ್‌ವೆರ್ಸ್‌ಹಾಕಿ ಕೊಡೋಣ. ವಾಟರ್ ಸಪ್ಲೈ ಸ್ಕೀಂ ಅನ್ನು ಮಂಜೂರು ಮಾಡುವುದಕ್ಕೆ ಬರುವುದಿಲ್ಲ. ಇದಕ್ಕೆ ಅವರು 10 ಪರ್ಸೆಂಟ್ ಕಂಟ್ರಿಬ್ಯೂಷನ್ ಅನ್ನು ಕೊಡಬೇಕಾಗುತ್ತದೆ.

Irrigation Tank near Ichalayallapur Village

264. Sri M. M. NADAF (Shiggoan).—

Will the Minister for Public Works and Electricity be pleased to state.—

(a) whether it has come to the notice that an Irrigation tank is being built near Ichalayallapur village of Savanur Taluk ;